

ಶತಾಯುಷಿ ಎ.ಎನ್. ಮೂರ್ತಿರಾಯರ 'ಅಪರ ವಯಸ್ಕನ ಅಮೆರಿಕಾ ಯಾತ್ರೆ' ಓದುತ್ತಿದ್ದೆ. ತಮ್ಮ ಮೊಮ್ಮಕ್ಕಳ ಜೊತೆಗಿನ ಒಡನಾಟವನ್ನು ವಿವರಿಸುತ್ತಾ ಅವರು ಬರೆದಿರುವ ಮಾತುಗಳು ಹೀಗಿವೆ: 'ನನ್ನ ನಾಲ್ಕು ವರ್ಷದ ಮೊಮ್ಮಗಳು ಆಶಾ ಪ್ರೀತಿ ತೋರಿಸುವ ವಿಧಾನಕ್ಕೂ, ಸುನೀಲನ ವಿಧಾನಕ್ಕೂ ಸ್ಪಷ್ಟವಾಗಿ ಕಾಣುವಂಥ ವ್ಯತ್ಯಾಸವಿದೆ.  ಆಶಾ ಕ್ಷಣ ಮಾತ್ರದಲ್ಲಿ ನನಗೆ ಅನ್ನ ಸಾರು, ಹುಳಿ, ಪಲ್ಯ, ಪಾಯಸ ಇವುಗಳ ಭಾರಿ ಔತಣ ಮಾಡಿಬಿಡುತ್ತಾಳೆ. ಪಾಯಸ ಬೇಕಾ? ಎನ್ನುತ್ತಾ ನನ್ನ ಕಡೆಗೆ ಕೈ ನೀಡಿದರೆ ಸಾಕು, ಪಾಯಸ!  ಸುನೀಲ ನನಗೇನನ್ನೂ ಬಡಿಸಲಿಲ್ಲ.  ತನ್ನ ಟ್ರೈಸಿಕಲ್ಲು, ಅಗ್ನಿಶಾಮಕ ಯಂತ್ರ, ಚೆಂಡು ಇತ್ಯಾದಿಗಳನ್ನು ತಂದು ನನ್ನೆದುರಿಗೆ ಪ್ರದರ್ಶಿಸಿದ. ಆಮೇಲೆ ಟ್ರೈಸಿಕಲ್ ಸವಾರಿ ಮಾಡುತ್ತಾ 'ಆತಂಕ ಪಡಬೇಡ ತಾತಾ, ನಾನು ಕರೆದುಕೊಂಡು ಹೋಗ್ತೀನಿ. ಒಂದು ನಿಮಿಷದಲ್ಲಿ ಬಂದುಬಿಡ್ತೀನಿ' ಎಂದು ರಕ್ಷಣೆಯ ಆಶ್ವಾಸನೆ ಕೊಟ್ಟ. ಹುಟ್ಟಿದ ಘಳಿಗೆಯಲ್ಲೇ ಗಂಡು–ಹೆಣ್ಣುಗಳು ಬೇರೆ ಬೇರೆ ದಾರಿ ಹಿಡಿಯುತ್ತವೇನೋ!'

ಎ.ಎನ್. ಮೂರ್ತಿರಾಯರು ಈ ಪುಸ್ತಕವನ್ನು ಬರೆದದ್ದು 1973ರ ತಮ್ಮ ಅಮೆರಿಕಾದ ಅನುಭವವನ್ನು ಕುರಿತು. ಅಂದರೆ ಸುಮಾರು 45 ವರ್ಷಗಳ ಹಿಂದೆ!  ಈ 45 ವರ್ಷಗಳಲ್ಲಿ 2– 3 ತಲೆಮಾರುಗಳಾದರೂ ಆಗಿವೆ. ಆದರೆ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಇಬ್ಬರನ್ನೂ ನಾವು ಬಾಲ್ಯದಿಂದ ಹೇಗೆ ಬೆಳೆಸಬೇಕು, ಇಬ್ಬರಲ್ಲೂ ಇರುವ ವ್ಯತ್ಯಾಸಗಳನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು.. ಎಂಬುದರ ಬಗೆಗೆ ಗೊಂದಲಗಳು ಹಾಗೆಯೇ ಇವೆ. ಅಥವಾ ಹಾಗೆ ನೋಡಿದರೆ ಗೊಂದಲ ಈಗ ಇನ್ನೂ ಹೆಚ್ಚು ಎನ್ನಲೂಬಹುದು. ಗಂಡು ಮಕ್ಕಳು ಅತ್ತಾಗ 'ಏಯ್, ಹುಡುಗ ಆಗಿ ಯಾರಾದ್ರೂ ಅಳ್ತಾರ' ಎಂದು ನಾವು ಗದರಿಸುತ್ತೇವೆ.  ಅಥವಾ ಅಮ್ಮನೊಡನೆ ತಿರುಗಾಡುವ, ಅಮ್ಮನಿಗೆ ದೂರು ಹೇಳುವ ಹುಡುಗನನ್ನು ಅತನ ಗೆಳೆಯರು/ ಗೆಳತಿಯರು ಕರೆಯುವುದು **Mama's boy** ಎಂದೇ! ಇನ್ನು 'ನಿಮ್ಮ ಮಗ ಪರೀಕ್ಷೆಯಲ್ಲಿ ಹೇಗೆ ಮಾಡಿದ್ದಾನೆ?' ಎಂದು ತಾಯಿಯೊಬ್ಬಳನ್ನು ಕೇಳಿದಾಗ ಅವರ ಉತ್ತರವೇನು ಗೊತ್ತೆ?  'ಅವನು ಹುಡುಗ!' ಅರ್ಥವಾಗದೆ ಕಣ್ಣು ಕಣ್ಣು ಬಿಡುತ್ತಿದ್ದ ಉಳಿದವರಿಗೆ ಅವರು ವಿವರಿಸಿದ್ದು – ಹುಡುಗ ಅಂದ್ರೆ ಗೊತ್ತೇ ಇದೆಯಲ್ಲಾ, ಓದೋದೇ ಇಲ್ಲ. ಹೇಗೋ ಹೋಗಿ ಪರೀಕ್ಷೆ ಬರೆದು ಪಾಸಾಗ್ತಾ ಇದಾನೆ, ಅದೇ ನನ್ನ ಪುಣ್ಯ!

ನಮ್ಮ ಸಮಾಜದ ಈ ರೀತಿ ನೀತಿಗಳನ್ನು ಗಮನಿಸಿದಾಗ, ಗಂಡು ಮಕ್ಕಳನ್ನು ಬೆಳೆಸುವ ವಿಧಾನದ ಬಗ್ಗೆ  ನಾವು  ವೈಜ್ಞಾನಿಕವಾಗಿ ಯೋಚಿಸುವ ಅವಶ್ಯಕತೆ ಇದೆ ಎನ್ನುವುದು ಗೊತ್ತಾಗುತ್ತದೆ. 'ಗಂಡು ಮಗು' ಎಂದಾಕ್ಷಣ ಸಂಭ್ರಮಿಸಿ, ಗಂಡು ಮಕ್ಕಳನ್ನು 'ಹೇಗಿದ್ದರೂ ಅವನು ಗಂಡು ಹುಡುಗ' ಎಂದು ಅವರ ಆಹಾರ, –ಆರೈಕೆಯ ಬಗೆಗೆ ಮಾತ್ರ ಅತಿ ಕಾಳಜಿ ಮಾಡಿ ತಾನೇ 'ಬೆಳೆದುಕೊಳ್ಳಲು' ಬಿಡುವವರೇ ಹೆಚ್ಚು. ಈ ಪ್ರವೃತ್ತಿಯಿಂದ ಮುಂದೆ ನರಳುವವರು ಗಂಡು ಮಕ್ಕಳು, ಹೆಣ್ಣು ಮಕ್ಕಳು (ತಾಯಿ/ –ಹೆಂಡತಿ ಇಬ್ಬರೂ!), ಅವರನ್ನು ಅರ್ಥ ಮಾಡಿಕೊಳ್ಳಲಾಗದ ಸಮಾಜ ಎಲ್ಲರೂ.

ಹಾಗಾದರೆ ಗಂಡು ಮಕ್ಕಳನ್ನು ಹೇಗೆ ಬೆಳೆಸಬೇಕು? 'ನಮಗೆ ಗಂಡು ಮಕ್ಕಳಿಲ್ಲ ಕಣ್ರೀ, ಹಾಗಾಗಿ ಇದನ್ನೇನು ಓದೋದು' ಎಂದು ಓದುವುದನ್ನು ಬಿಟ್ಟುಬಿಡಬೇಡಿ. ಏಕೆಂದರೆ ಗಂಡು ಮಕ್ಕಳನ್ನು ಬೆಳೆಸುವಾಗ ನಾವು ಹೆಣ್ಣು ಮಕ್ಕಳನ್ನು ಬೆಳೆಸುವ ರೀತಿಯಿಂದ ಹೇಗೆ ಅದು ಭಿನ್ನ ಎಂದು ಅರಿಯಬೇಕಷ್ಟೆ. ಅಂದ ಮೇಲೆ ಹೆಣ್ಣುಮಕ್ಕಳನ್ನು ಬೆಳೆಸುವುದರ ಬಗ್ಗೆಯೂ ವಿಷಯಗಳನ್ನು ಚರ್ಚಿಸಲೇಬೇಕು. ಜೊತೆಗೇ ಗಂಡು ಮಕ್ಕಳನ್ನು ಬೆಳೆಸುವಲ್ಲಿ ಹಲವು ಅಭಿಪ್ರಾಯಗಳು ರೂಪಿಸಲ್ಪಡುವುದು ಸಾಮಾಜಿಕ ಧೋರಣೆಗಳಿಂದ. ಹಾಗಾಗಿ ಈ ಧೋರಣೆಗಳು ಸರಿಯಾಗಬೇಕಿದ್ದರೆ ನಿಮಗೆ ಯಾವ ಮಕ್ಕಳೇ ಇದ್ದರೂ, ಅಥವಾ ನಿಮ್ಮ ಮಕ್ಕಳು ದೊಡ್ಡವರಾಗಿಬಿಟ್ಟಿದ್ದರೂ, ನಿಮ್ಮ 'ಬೆಳೆಸುವ' ಕೆಲಸ ಮುಗಿದಿದ್ದರೂ ನೀವು ಈ ಲೇಖನ ಓದಲೇಬೇಕು!

## ಇವರು ಬೇರೆ ಥರಾ 'ಆಡೋದು' ಯಾಕೆ?

ಹುಡುಗರು ಮತ್ತು ಹುಡುಗಿಯರಲ್ಲಿ ನಾವಂದುಕೊಳ್ಳುವ ವ್ಯತ್ಯಾಸಗಳಿಗೆ